**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2016-17** **ದಿನಾಂಕ: 04-03-2017**

# ಪತ್ರಿಕಾ ಆಮಂತ್ರಣ

1. ಕಣಜ ಜ್ಞಾನ ಕೋಶ ಮತ್ತು ಜ್ಞಾನಡಾಟ್‌ಕಾಮ್ ಸಹಕಯೋಗದಲ್ಲಿ ಕನ್ನಡ ಭಾಷೆಯಲ್ಲಿ ತಂತ್ರಜ್ಞಾನ ಪ್ರಗತಿ ಮತ್ತು ಸಾಧ್ಯತೆಗಳ ಬಗ್ಗೆ ಸಂವಾದ ಮತ್ತು ಪ್ರದರ್ಶನ:

   ಉದ್ಘಾಟನೆ:

   ಶ್ರೀ ಕೆ. ಎ. ದಯಾನಂದ,

   ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,

   "ಕನ್ನಡ ತಂತ್ರಜ್ಞಾನ ನಿನ್ನೆ ಇಂದು ನಾಳೆ" ಕಿರುಹೊತ್ತಿಗೆ ಲೋಕಾರ್ಪಣೆ

   ಶ್ರೀ ರವಿ ಹೆಗ್ಗಡೆ, ಸಂಪಾದಕರು, ಕನ್ನಡ ಪ್ರಭ

   ದಿನಾಂಕ: 5-3-2017 ಭಾನುವಾರ ಬೆಳಿಗ್ಗೆ 10-00 ಗಂಟೆಗೆ

   ಸ್ಥಳ: ರವೀಂದ್ರ ಕಲಾಕ್ಷೇತ್ರ ಆವರಣ, ಬೆಂಗಳೂರು

2. **"ಭಾರತ ಭಾಗ್ಯ ವಿಧಾತ" ಧ್ವನಿ-ಬೆಳಕು; ದೃಶ್ಯ ವೈಭವಗಳ ರೂಪಕ**

   **ಸಮಾರೋಪ ಸಮಾರಂಭ:**

   **ಸಮ್ಮುಖ:**

   **ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ**

   **ಹಾಗೂ ಸಚಿವ ಸಂಪುಟದ ಸದಸ್ಯರು.**

   **ದಿನಾಂಕ: 05-03-2017 ಭಾನುವಾರ, ಸಂಜೆ 6.30 ಗಂಟೆಗೆ**

ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣ, ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್, ಬಸವೇಶ್ವರನಗರ, ಬೆಂಗಳೂರು

## ಪತ್ರಿಕಾ ಪ್ರಕಟಣೆ

# ಉದ್ಯಮಿಗಳು ಚತುರತೆ ಹಾಗೂ ಕಾರ್ಯದಕ್ಷತೆಯಿಂದ ಎಲ್ಲಾ ರಂಗಗಳಲ್ಲೂ ಮುಂದೆ ಬರಬೇಕು – ಮುಖ್ಯ ಕಾರ್ಯದರ್ಶಿ

ಬೆಂಗಳೂರು, ಮಾರ್ಚ್ 4 , (ಕರ್ನಾಟಕ ವಾರ್ತೆ)

ಕರ್ನಾಟಕದಲ್ಲಿ ಉದ್ಯಮಿಗಳು ಚತುರತೆ ಹಾಗೂ ಕಾರ್ಯದಕ್ಷತೆಯಿಂದ ಎಲ್ಲಾ ರಂಗಗಳಲ್ಲೂ ಮುಂದೆ ಬರಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಭಾಷ್ ಚಂದ್ರ ಕುಂಟಿಯಾ ಅವರು ತಿಳಿಸಿದರು.

ಅವರು ಇಂದು ನಗರದ ಹೋಟೆಲ್ ಪಾರ್ಕ್ ಪ್ಲಾಜಾದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಾಮಾಜಿಕ ಉದ್ಯಮ ಹಾಗೂ ಉದ್ಯಮಿಗಳ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದರು.

ಆರೋಗ್ಯ ಹಾಗೂ ಶಿಕ್ಷಣಕ್ಕೆ ಒತ್ತು ನೀಡುವಂತೆ ಉದ್ದಿಮೆಗಳ ಸಲಹೆ ನೀಡಿದ ಅವರು ಕೌಶಲ್ಯ ಅಭಿವೃದ್ಧಿ ಪ್ರಾಮುಖ್ಯತೆಯನ್ನು ಸಹ ತಿಳಿಸಿದರು. ಅವರು ಅಗಸ್ತ್ಯ – ಸಂಚಾರಿ ವೈಜ್ಞಾನಿಕ ಪ್ರಯೋಗಾಲಯ, ಡ್ರೀಮ್ ಡ್ರೀಮ್ ಕೊಳಗೇರಿಗಳ ಅಭಿವೃದ್ಧಿಗೆ ಶ್ರಮಿಸಿದ ಸಂಸ್ಥೆಯನ್ನು ಪ್ರಶಂಸಿದರು. ಡ್ರೀಮ್ ಡ್ರೀಮ್ ಸಂಸ್ಥೆ ಅತಿಚಿಕ್ಕ ಮಕ್ಕಳ ಶಾಲೆಗಳ ಏಳ್ಗೆಗೆ ಶ್ರಮಿಸುತ್ತಿದ್ದು, ದೇಶಾದ್ಯಂತ 127 ಶಾಲೆಗಳನ್ನು ಹೊಂದಿದೆ ಎಂದರು.

ಸರ್ಕಾರಕ್ಕೂ ಸಹ ಕ್ರಿಯಾಶೀಲ ಉದ್ಯಮಿಗಳ ಅವಶ್ಯಕತೆ ಇದ್ದು, ಇವರನ್ನು ಸರ್ಕಾರದ ಮಟ್ಟದಲ್ಲಿ ಬಳಸಿಕೊಳ್ಳಲು ಚಿಂತನೆ ನಡೆಸಲಾಗುತ್ತಿದೆ ಎಂದರು.

ಆರೋಗ್ಯ ವಲಯದಲ್ಲಿ ಸಹ ಉದ್ಯಮಿಗಳು ತಮ್ಮ ಪ್ರತಿಭೆ ತೋರಿಸಿದ್ದು ಅದರಲ್ಲಿ 108 ಅಂಬುಲೆನ್ಸ್ ಸೇವೆ, ಸ್ಟ್ರಾಂಡ್ ಜೀವಿ ವಿಜ್ಞಾನ, ಹಿಪ್ಪೋಕ್ಯಾಪಸ್ ಹಾಗೂ ಇತರೆ ಸೇರಿವೆ ಎಂದರು.

ಈ ಕಾರ್ಯಕ್ರಮ ಐಐಟಿ ಕರಗಪುರ, ಕಾನ್ಪುರದ ಹಳೆಯ ವಿದ್ಯಾರ್ಥಿಗಳು ಐ.ಐ.ಟಿ. ಐ.ಐ.ಎಂ. ಹಳೆಯ ವಿದ್ಯಾರ್ಥಿಗಳು, ಇತರ ಪ್ರಮುಖ ಉದ್ಯಮಿಗಳು ಸಂಸ್ಥೆಗಳ ಸಹಯೋಗದಲ್ಲಿ ನಡೆಸಲಾಗಿದ್ದು, ಈ ಸಂದರ್ಭದಲ್ಲಿ ಅನೇಕ ಉದ್ಯಮಿಗಳು ತಮ್ಮ ಅನಿಸಿಕೆ ಹಂಚಿಕೊಂಡರು.
(ಛಾಯಾಚಿತ್ರ ಲಗತ್ತಿಸಿದೆ)

Photo Caption:

Chief Secretary to Government Mr. Subhash Chandra Khuntia addressed the second edition of sociual entrepreneurs and enterprises conference at Hotel Park Plaza today. He emphasised about the need of good entrepreneurs in various sectors including education, health, IT and Helath Sciences

ಕೆಎನ್‌ಕೆ:ಜಿಪಿಆರ್.

## ವಾರ್ತಾ ಇಲಾಖೆಯ ನಿರ್ದೇಶಕ ಶ್ರೀ ಎನ್.ಆರ್. ವಿಶುಕುಮಾರ್ ಅವರಿಗೆ ಅತ್ಯುತ್ತಮ ಸಂವಹನಕಾರ ಪ್ರಶಸ್ತಿ

ಬೆಂಗಳೂರು, ಮಾರ್ಚ್ 4, (ಕರ್ನಾಟಕ ವಾರ್ತೆ)

ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿ ನೀಡುವ ಅತ್ಯುತ್ತಮ ಸಂವಹನಕಾರ (ಸರ್ಕಾರ) ಪ್ರಶಸ್ತಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್.ಆರ್. ವಿಶುಕುಮಾರ್ ಅವರು ಪಡೆದುಕೊಂಡಿದ್ದಾರೆ.

ಬೆಂಗಳೂರಿನಲ್ಲಿ ಇಂದು ಆಯೋಜಿಸಲಾಗಿದ್ದ 11 ನೇ ಜಾಗತಿಕ ಸಂವಹನ ಸಮ್ಮೇಳನದಲ್ಲಿ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಮತ್ತು ಪ್ರವಾಸೋದ್ಯಮ ಸಚಿವ ಪ್ರಿಯಾಂಕ ಖರ್ಗೆ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಕಟಣಾ ವಿಭಾಗಕ್ಕೆ ಒಟ್ಟು ಮೂರು ಪ್ರಶಸ್ತಿಗಳನ್ನು ಲಭಿಸಿದ್ದು, ಗಾಂಧೀ ಕುರಿತ ಪುಸ್ತಕ ಈ ಪೈಕಿ ಸೇರಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಹೊರತಂದಿರುವ ಗಾಂಧೀಜಿ ಕುರಿತ ಪುಸ್ತಕಕ್ಕೆ ಅತ್ಯುತ್ತಮ ಪ್ರಕಟಣೆ ಪ್ರಶಸ್ತಿ ಲಭಿಸಿದೆ. ಇಲಾಖೆಯ ಉಪ ನಿರ್ದೇಶಕರಾದ ಬಸವರಾಜ ಕಂಬಿ ಹಾಗೂ ಹೆಚ್.ಬಿ. ದಿನೇಶ್ ಅವರು ಪ್ರಶಸ್ತಿ ಸ್ವೀಕರಿಸಿದರು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ: ಚಂದ್ರಶೇಖರ ಕಂಬಾರ ಅವರು ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಛಾಯಾಚಿತ್ರ ಲಗತ್ತಿಸಿದೆ)

ಎಆರ್‌ಪಿ/ಕೆಎಂ

# ಬದಲಿ ಔಷಧಿ ಮಾರಾಟ ಪ್ರಕರಣ – ಮೊಕದ್ದಮೆ ದಾಖಲಿಸಿ ದಂಡ ವಸೂಲಿ

ಬೆಂಗಳೂರು, ಮಾರ್ಚ್ 4 , (ಕರ್ನಾಟಕ ವಾರ್ತೆ)

ಮೆ: ಶ್ರೀ ಹರ್ಷ ಪಾರ್ಮ, ನಂ. 174/175, 14ನೇ ಮುಖ್ಯರಸ್ತೆ, ಕುಮಾರಸ್ವಾಮಿ ಲೇಔಟ್, ಬೆಂಗಳೂರು – 78 ಈ ಸಂಸ್ಥೆಯ ಮಾಲೀಕ ಶ್ರೀ ಟಿ.ಎಸ್. ಅಶ್ವಥ್ ನಾರಾಯಣ ರೆಡ್ಡಿ ಇವರು " **Asthakind P Drops**" ಈ ಔಷಧಿಗೆ ಬದಲಾಗಿ "**Azithral Liquid 100 oral Suspension**" ಔಷಧವನ್ನು ಮಾರಾಟ ಮಾಡಿರುವುದಕ್ಕೆ, ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ 1940 ರ ಉಲ್ಲಂಘನೆ ಮಾಡಿದ್ದಕ್ಕಾಗಿ ವಿಶೇಷ ಆರ್ಥಿಕ ಅಪರಾಧಗಳ ನ್ಯಾಯಾಲಯ, ಬೆಂಗಳೂರು ಇಲ್ಲಿ ಮೊಕದ್ದಮೆಯನ್ನು ದಾಖಲಿಸಿದ್ದು, ನ್ಯಾಯಾಲಯವು ಸದರಿ ಆರೋಪಿಗೆ ರೂ. 70,000/- ಗಳ ದಂಡವನ್ನು ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೂ ಸಾದಾ ಜೈಲು ಶಿಕ್ಷೆಯನ್ನು ವಿಧಿಸಿ ತೀರ್ಪು ನೀಡಿರುತ್ತದೆ (ಸಿ.ಸಿ.ಸಂಖ್ಯೆ: 21/2015)

ಮೆ: ಅಕ್ಯೂಮ್ಸ್ ಡ್ರಗ್ಸ್ ಅಂಡ್ ಫಾರ್ಮಸ್ಯೂಟಿಕಲ್ಸ್ ಲಿ. 19, 230, 21 ಸೆಕ್ಟಾರ್, 6 ಎ, 11ಇ ಸಿದುಲ್ ರಾನಿಪುರ್, ಹರಿದ್ವಾರ್ (ಆರೋಪಿ1) ಈ ಸಂಸ್ಥೆಯ ನಿರ್ದೇಶಕ ಎನ್.ಡಿ. ಸಚ್‌ದೇವ್ (ಆರೋಪಿ2) ಹಿಮಥ್ ಸಿಂಗ್, ತಯಾರಿಕಾ ರಸಾಯನ ತಜ್ಞರು (ಆರೋಪಿ3), ಸುದೀತ್ ಕುಮಾರ್ ಸಿಂಗ್, ವಿಶ್ಲೇಷನಾ ರಸಾಯನ ತಜ್ಞರು ಇವರು ಅನುತ್ತಮ ಗುಣಮಟ್ಟದ ಔಷಧವಾದ "**RABELIX DSR (Rabeprazole & Domperidone capsules)**" ಅನ್ನು ತಯಾರಿಸಿ, ಮಾರಾಟ ಮಾಡಿ ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ 1940 ರ ಉಲ್ಲಂಘನೆ ಮಾಡಿದ್ದಕ್ಕಾಗಿ ವಿಶೇಷ ಆರ್ಥಿಕ ಅಪರಾಧಗಳ ನ್ಯಾಯಾಲಯ, ಬೆಂಗಳೂರು ಇಲ್ಲಿ ಮೊಕದ್ದಮೆಯನ್ನು ದಾಖಲಿಸಿದ್ದು, ನ್ಯಾಯಾಲಯವು ಸದರಿ 1 ಮತ್ತು 2 ಇವರಿಗೆ ತಲಾ ರೂ. 70,000/- ಗಳ ದಂಡವನ್ನು, ಆರೋಪಿ 3, 4 ಇವರಿಗೆ ತಲಾ ರೂ. 20,000 (ದಂಡವನ್ನು ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೂ ಸಾದಾ ಜೈಲು ಶಿಕ್ಷೆಯನ್ನು ವಿಧಿಸಿ ತೀರ್ಪು ನೀಡಿರುತ್ತದೆ (ಸಿ.ಸಿ. ಸಂಖ್ಯೆ01/2016).

ಕೆಎನ್‌ಕೆ/ಜಿಪಿಆರ್

# DUPLICATE MEDICINE SELLERS CHARGED AGAINSTS, FINE RECOVERY

**Bengaluru March 4 (Karnataka Information)**

The Hon'ble Court of Special (Economic Offence) Bengaluru has convicted Sri Ashwathanarayana, Proprietor of the firm M/s Varsha Pharma, No. 174/175, 14th Main Road, Kumaraswamy Layout, Bengaluru – 78 who has been sold "Azithral Liquid 100 oral Suspension" by substitution instead of "Asthakind P Drops"by imposing fine of Rs 70,000/- & sentenced to undergo simple imprisonment till raising of the Court (C.C. No: 21/2015.)**

**The Hon'ble Court of Special (Economic offence) Bengaluru has Convicted M/s Akums drugs & Pharmaceuticals Ltd., 19, 20, 21 Sector 6[a] 11E Sidul Ranipur, Haridwar (A1) Sri N.D. Sachdey, Director of the frms (A2) Sri. Himmat Singh, Manufacturing Chemist (A3), Sri Sudhir Kumar Singh, Analytical Chemist (A4) who were responsible for having manufcatgured and sold the Drug "RABELIX DSR (Rabeprazole & Doperidoe Capsules)" B. No. YKAH01, D/M: 07/2011, D/E" 06/13 which has been declared as "Not of Stndard Quality" by imposing fine of Rs. 70,000/- for A1 & A2 eac and for A3 & A4 fine of Rs 20,000/- each & sentenced to undergo simple imprisonment till raising of the Court C.C. No. 01/2016.)**

**knk/gpr**

## ಮಾರ್ಚ್ 7 ರಂದು

## ದಲಿತ ವಚನಕಾರರ ಜಯಂತಿ

ಬೆಂಗಳೂರು, ಮಾರ್ಚ್ 4 , (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಾರ್ಚ್ 7 ರಂದು ಬೆಳಿಗ್ಗೆ 10.45 ಗಂಟೆಗೆ ನಗರದ ಮಲ್ಲತ್ತಹಳ್ಳಿಯ ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯದಲ್ಲಿ ದಲಿತ ವಚನಕಾರರ ಜಯಂತಿಯನ್ನು ಹಮ್ಮಿಕೊಂಡಿದೆ.

ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವೆ ಶ್ರೀಮತಿ ಉಮಾಶ್ರೀ ಅವರು ದಲಿತ ವಚನಕಾರರ ಜಯಂತಿ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ

ಸಮಾರಂಭದ ಅಧ್ಯಕ್ಷತೆಯನ್ನು ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಮುನಿರತ್ನ ಅವರು ವಹಿಸಲಿದ್ದಾರೆ. ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರಾದ ಶ್ರೀಮತಿ ಜಿ. ಪದ್ಮಾವತಿ, ಪುತ್ತೂರು ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಸದೀಯ ಕಾರ್ಯದರ್ಶಿ ಶ್ರೀಮತಿ ಶಕುಂತಲಾ ಟಿ. ಶೆಟ್ಟಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಅಂದು ಮಧ್ಯಾಹ್ನ 12.00 ಗಂಟೆಗೆ ವಚನ ಚಳುವಳಿ ಮತ್ತು ತಳವರ್ಗದ ವಚನಕಾರರು ವಿಚಾರಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದ್ದು, ಖ್ಯಾತ ಸಾಹಿತಿ ಡಾ. ಕೆ.ಬಿ. ಸಿದ್ದಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಮೈಸೂರಿನ ಡಾ. ಎಂ.ಎಸ್. ಶೇಖರ್ ಅವರು ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ ಕುರಿತಂತೆ ಹಾಗೂ ಕಲಬುರಗಿ ಡಾ. ಸೂರ್ಯಕಾಂತ ಸುಜ್ಯಾತ ಅವರು ಉರಿಲಿಂಗಪೆದ್ದಿ, ಮಾದಾರ ಧೂಳಯ್ಯ, ಸಮಗಾರ ಹರಳಯ್ಯ ಕುರಿತಂತೆ ವಿಚಾರ ಮಂಡನೆ ಮಾಡಲಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಮಂಜುನಾಥ ಮತ್ತು ತಂಡದವರಿಂದ ಡೊಳ್ಳು ಕುಣಿತ, ಮೈಸೂರು ಜಿಲ್ಲೆಯ ನಿತಿನ್ ಮತ್ತು ತಂಡದವರಿಂದ ಕಂಸಾಳೆ, ತುಮಕೂರು ಜಿಲ್ಲೆಯ ಕೆಂಪರಾಜು ಮತ್ತು ತಂಡದವರಿಂದ ಸೋಮನ ಕುಣಿತ, ಧಾರವಾಡ ಜಿಲ್ಲೆಯ ದಮ್ಮಪ್ಪ ಮಡಿವಾಳಪ್ಪ ಕುಂಬರರಿಂದ ಕರಡಿಮಜಲು, ಮಂಡ್ಯ ಜಿಲ್ಲೆಯ ಚಿಕ್ಕಣ್ಣ ಮತ್ತು ತಂಡದವರಿಂದ ಪೂಜಾ ಕುಣಿತ ಹಾಗೂ ರವಿಕಿರಣ ಮತ್ತು ತಂಡದವರಿಂದ ನಾದಸ್ವರ, ಚಿಕ್ಕಮಗಳೂರು ಜಿಲ್ಲೆಯ ರಾಮು ಮತ್ತು ತಂಡದವರಿಂದ ಚಿಟ್ ಮೇಳ, ರಾಮನಗರ ಜಿಲ್ಲೆಯ ವೆಂಕಟಯ್ಯ ಮತ್ತು ತಂಡದವರಿಂದ ತಮಟೆ ವಾದನ, ಹಾವೇರಿ ಜಿಲ್ಲೆಯ ಬಸವಣ್ಣಪ್ಪ ಹಡವಳಗಿ ಮತ್ತು ತಂಡದವರಿಂದ ಪುರುವಂತಿಕೆ, ಬೆಳಗಾವಿ ಜಿಲ್ಲೆಯ ಮಹಂತೇಶ್ ಹೂಗರ್ ಮತ್ತು ತಂಡದವರಿಂದ ಸಂಬಾಳ ವಾದನ, ಬೆಂಗಳೂರು ನಿರಂಜನ್‌ಮೂರ್ತಿ ಮತ್ತು ತಂಡದವರಿಂದ ವೀರಗಾಸೆ ಹಾಗೂ ಚಿತ್ರದುರ್ಗ ಜಿಲ್ಲೆಯ ನಿಂಗರಾಜು ಮತ್ತು ತಂಡದವರಿಂದ ಕೀಲು ಕುದುರೆ ಸೇರಿದಂತೆ ವಿವಿಧ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

**ಕೆಎನ್‌ಕೆ/ಜಿಪಿಆರ್**

## ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು, ಮಾರ್ಚ್ 4 , (ಕರ್ನಾಟಕ ವಾರ್ತೆ)**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ:05-03-2017ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) **ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ** ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಉದಯರಾಗ" ಎಂಬ **ಶೀರ್ಷಿಕೆಯಡಿ** ಶ್ರೀಮತಿ. ಎಂ.ಎಸ್. ದೀಪಾ ಮತ್ತು ತಂಡ, ದಾವಣಗೆರೆ ಜಿಲ್ಲೆ ರವರಿಂದ ಸುಗಮ ಸಂಗೀತ **ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

2) **ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ** ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಸಂಧ್ಯಾರಾಗ" ಎಂಬ **ಶೀರ್ಷಿಕೆಯಡಿ** ಶ್ರೀ.ಅನಿಲ್ ಮತ್ತು ತಂಡ, ದಕ್ಷಿಣ ಕನ್ನಡ ಜಿಲ್ಲೆ ರವರಿಂದ ಜಾನಪದ ಗೀತೆಗಳ ಸಂಗೀತ **ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

3) **ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ** ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

4) **ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ** ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ **ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು** ಪಡೆಯಬಹುದು.

## ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:

### I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

- ಬೆಳಿಗ್ಗೆ 7.30 ಗಂಟೆಯಿಂದ 8.30 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯ ಸಹಯೋಗದೊಂದಿಗೆ ಗುರು ಶ್ರೀ. ಬಾಲಗುರು ರವರ ಮಾತಂಗಿ ಸಂಗೀತ ಶಾಲಾ ವತಿಯಿಂದ **ಕರ್ನಾಟಕ ಶಾಸ್ತ್ರೀಯ ಸಂಗೀತ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಿಗ್ಗೆ 8.30 ಗಂಟೆಯಿಂದ 9.30 ಗಂಟೆಯವರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಾಲಭವನ ಸೊಸೈಟಿ, ಬೆಂಗಳೂರು ರವರ ಸಹಯೋಗದೊಂದಿಗೆ ಇಂದಿರಾ ಸಂಗೀತ ಸಭೆ, ಬೆಂಗಳೂರು ರವರಿಂದ **ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಹಾಗೂ ತಬಲ ವಾದನ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಿಗ್ಗೆ 9.30 ಗಂಟೆಯಿಂದ 10.30 ಗಂಟೆಯವರೆಗೆ ಶ್ರೀವಾಣಿ ವಿದ್ಯಾ ಕೇಂದ್ರ, ಮಾಚೋಹಳ್ಳಿ, ಬೆಂಗಳೂರು ರವರ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

**II.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣದ ಮುಂಭಾಗದ ಪ್ರದೇಶದಲ್ಲಿ**

- ಬೆಳಿಗ್ಗೆ 6.00 ಗಂಟೆಯಿಂದ ಬೆಳಿಗ್ಗೆ 12.00 ಗಂಟೆಯವರೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ **Confederation Of Women Enterpreneurs** ಸಂಸ್ಥೆಯ ಸಹಯೋಗದೊಂದಿಗೆ ಮಹಿಳಾ ದಿನಾಚರಣೆ ಅಂಗವಾಗಿ ವಾಕಥಾನ್ ಮತ್ತು ಆರೋಗ್ಯ ತಪಾಸಣೆ ಶಿಬಿರ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಿಗ್ಗೆ 6.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ರೋಟರಿ ಕ್ಲಬ್ ಆಫ್ ಬೆಂಗಳೂರು, ಕೋರಮಂಗಲ ಶಾಖೆ ಮತ್ತು **Trees for free** ಸಂಸ್ಥೆರವರ ಸಹಯೋಗದೊಂದಿಗೆ **Karl Drais of Mannheim in Germany** ರವರು 200 ವರ್ಷಗಳ (1817–2017) ಹಿಂದೆ ತಯಾರಿಸಿದ **Replica of First Wooden Bicycle** ಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಿಗ್ಗೆ 8.30 ಗಂಟೆಯಿಂದ ಬೆಳಿಗ್ಗೆ 11.00 ಗಂಟೆಯವರೆಗೆ ಮಹಿಳಾ ದಿನಾಚರಣೆಯ ಪ್ರಯುಕ್ತ ಅಕ್ಷರ ಯೋಗ, ಬೆಂಗಳೂರು ರವರ ವತಿಯಿಂದ ಸ್ವ–ಆತ್ಮ ರಕ್ಷಣೆ ಹಾಗೂ ಯೋಗದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

# ರೈತರು ಇನ್‌ಪುಟ್ ಸಬ್ಸಿಡಿ ಪಡೆಯಲು ಆಧಾರ್ ಕಡ್ಡಾಯ

**ಬೆಂಗಳೂರು, ಮಾರ್ಚ್ 4, (ಕರ್ನಾಟಕ ವಾರ್ತೆ)**

2016 ರ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಬರ ಪರಿಸ್ಥಿತಿಯಿಂದ ಬೆಳೆ ಹಾನಿ ಹೊಂದಿರುವ ರಾಜ್ಯದ ಫಲಾನುಭವಿ ರೈತರಿಗೆ ಇನ್‌ಫುಟ್ ಸಬ್ಸಿಡಿ ವಿತರಣೆಯನ್ನು ಮಾಡುವ ಸಲುವಾಗಿ ರಾಜ್ಯ ಸರ್ಕಾರವು ಪರಿಹಾರ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದೆ.

ಕೇಂದ್ರ ಸರ್ಕಾರದ ನೇರ ಹಣ ಸಂದಾಯ ಯೋಜನೆ (ಡಿಬಿಟಿ)ಯಡಿ ಪ್ರತಿ ಫಲಾನುಭವಿ ರೈತರು ಇನ್‌ಫುಟ್ ಸಬ್ಸಿಡಿ ಸವಲತ್ತನ್ನು ಪಡೆಯಲು ಆಧಾರ್ ಸಂಖ್ಯೆ, ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಆಧಾರ್ ಜೋಡಣೆಗೆ ಒಪ್ಪಿಗೆ ನೀಡುವುದು ಕಡ್ಡಾಯವಾಗಿದೆ.

ಬರಪರಿಸ್ಥಿತಿಯ ಹಿನ್ನೆಲೆಯಲ್ಲಿ ಬೆಳೆ ಹಾನಿ ಹೊಂದಿರುವ ಫಲಾನುಭವಿ ರೈತರು ಇನ್‌ಫುಟ್ ಸಬ್ಸಿಡಿ ಸೌಲಭ್ಯ ಪಡೆಯುವ ಸಲುವಾಗಿ ಆಧಾರ್ ಸಂಖ್ಯೆ, ಬ್ಯಾಂಕ್ ಖಾತೆ ವಿವರ, ಮೊಬೈಲ್ ಸಂಖ್ಯೆ ವಿವರ ಮತ್ತು ಆಧಾರ್ ಜೋಡಣೆ ಪತ್ರದೊಂದಿಗೆ ಸಂಬಂಧಪಟ್ಟ ಬ್ಯಾಂಕಿಗೆ ದಿನಾಂಕ: 10–3–2017 ರೊಳಗೆ ಖುದ್ದಾಗಿ ಭೇಟಿ ನೀಡಿ ಮಾಹಿತಿಯನ್ನು ಸಲ್ಲಿಸುವಂತೆ ಸರ್ಕಾರದ ಕಾರ್ಯದರ್ಶಿ ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.